O.S.No.222/2014
D.W.:1

ಈ ದಿನ ದಿಃ04.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ಮಧ್ಯಂತರ ಅರ್ಜಿ ಆದೇಶ ದಿನಾಂಕ.22.01.2026ರ ಆಧಾರದ ಮೇಲೆ ಮುಂದುವರೆದ ಪಾಟೀ ಸವಾಲುಃ- ವಾದಿ ಪರ ವಕೀಲರಾದ ಶ್ರೀ ಕೆ.ವೈ.ಎಸ್ ರವರಿಂದಃ-**

14. ನಾನು ಗ್ರಾಮಲೆಕ್ಕಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೆ. ಸಾಕ್ಷಿಗೆ ನಿಡಿ-13ನ್ನು ತೋರಿಸಿ ಅದರಲ್ಲಿ ಬರೆದುಕೊಟ್ಟವರು ಮತ್ತು ಬರೆಸಿಕೊಂಡವರ ಹೆಸರನ್ನು ಓದಿ ಹೇಳಿರುತ್ತಾರೆ, ಸಾಕ್ಷಿಯು ಸದರಿ ದಾಖಲೆಯನ್ನು ಈಗಾಗಲೇ ತಮ್ಮ ಮುಖ್ಯವಿಚಾರಣೆ ಸಾಕ್ಷ್ಯದಲ್ಲಿ ಹಾಜರುಪಡಿಸಿರುವುದರಿಂದ ಅದರ ಅಂಶಗಳ ಬಗ್ಗೆ ಯಥಪ್ರಕಾರವಾಗಿ ಕೇಳುವ ಅವಶ್ಯಕತೆ ಇರುವುದಿಲ್ಲ. ಅದ್ದರಿಂದ ಅವರ ಈ ಪ್ರಶ್ನೆಯನ್ನು ತಳ್ಳಿ ಹಾಕಲಾಯಿತು. ನಿಡಿ-13ರಲ್ಲಿ ಕರಿಕುನ್ನ, ವೀರಭದ್ರಗೌಡ ಮತ್ತು ವೀರಭದ್ರೇಗೌಡ ರವರ ಮಗ ಮಾರೇಗೌಡ ಮತ್ತು ನನ್ನ ಅಣ್ಣನ ಮಗ ವೀರಭದ್ರೇಗೌಡ ಎಂಬ ಹೆಸರುಗಳನ್ನು ಮಾತ್ರ ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯ ಗಂಡನಾದ ವೀರಭದ್ರಗೌಡ ರವರೆ ಅಣ್ಣನ ಮಗ ವೀರಭದ್ರೇಗೌಡ ಎಂದು ಹೇಳಿರುವ ವ್ಯಕ್ತಿ ಎಂದು ನುಡಿಯುತ್ತಾರೆ. ನಿಡಿ-13ರಲ್ಲಿ ಕಾಡನ ಮಗ ವೀರಭದ್ರೇಗೌಡ ಎಂದು ಬರೆದಿಲ್ಲ ಎಂದರೆ ಸರಿ. ಕರಿಕುನ್ನ, ವೀರಭದ್ರೇಗೌಡ, ಮಾರೇಗೌಡ, ಅವರ ಅಣ್ಣನ ಮಗ

ವೀರಭದ್ರೇಗೌಡ ರವರು ಎಲ್ಲರು ಒಂದೇ ಕುಟುಂಬದವರು ಎಂದರೆ ಸರಿ. ಅವರುಗಳು ಒಂದೇ ಕುಟುಂಬದವರಾದ ಕಾರಣಕ್ಕೆ ನಿಡಿ-13ರಂತೆ ಇರುವ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿ.

15. ಕಾಡ ಮತ್ತು ಕರಿಕುನ್ನ ರವರು ಒಂದೇ ಕುಟುಂಬದವರು ಅಥವಾ ವಂಶಸ್ಥರು ಎಂದರೆ ಸರಿಯಲ್ಲ. ಕಾಡ ಮತ್ತು ಕರಿಕುನ್ನ ರವರು ಒಂದೇ ಕುಟುಂಬದವರು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ನನ್ನಿಂದ ಸಾಧ್ಯವಿಲ್ಲ. ಕಾಡ ಮತ್ತು ಕರಿಕುನ್ನ ರವರು ಒಂದೇ ಕುಟುಂಬದವರು ಅಲ್ಲದೆ ಇರುವ ಕಾರಣಕ್ಕೆ ಆ ರೀತಿಯ ಯಾವುದೇ ದಾಖಲೆ ಲಭ್ಯವಿಲ್ಲ ಎಂದರೆ ಸರಿಯಲ್ಲ. ನಿಡಿ-13ನ್ನು ಬರೆದುಕೊಟ್ಟವರು ಕಾಡ ಎಂಬುವವರಿಗೆ ಸಂಬಂಧಿಸಿದವರು ಎಂಬ ಬಗ್ಗೆ ಆ ದಾಖಲೆಯಲ್ಲಿ ಎಲ್ಲಿಯು ಒಕ್ಕಣೆಗಳು ಇಲ್ಲ ಎಂದರೆ ಸರಿ.

16. ಕಾಡ ರವರನ್ನು ಕಾಡೇಗೌಡ ಎಂತಲ್ಲೂ ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.72/2ರ ಪೂರ್ವಕ್ಕೆ ಭದ್ರಗಿರಿಗೌಡ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಖರಾಬು, ಉತ್ತರಕ್ಕೆ ಕೆಂಪಮ್ಮ ಲೇಟ್ ಬಸವಯ್ಯ ರವರ ಜಮೀನು ಮತ್ತು ದಕ್ಷಿಣಕ್ಕೆ ನಮ್ಮದೆ ಜಮೀನು ಅಂದರೆ ಸರ್ವೆ ನಂ.72/3ರ ಜಮೀನು ಬರುತ್ತದೆ. ನಿಡಿ-13ರ ಪ್ರಕಾರ ಸರ್ವೆ ನಂ.72/3 ರ ಜಮೀನಿನ

ಪೂರ್ವಕ್ಕೆ ಬಾಳೇಗೌಡ ರವರ ಮಗನಾದ ಚೂಡೇಗೌಡ ರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಖರಾಬು, ಉತ್ತರಕ್ಕೆ ಚಿಕ್ಕಪ್ಪ ಕಾಡೇಗೌಡನ ಜಮೀನು ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ನಿಡಿ-13ರಲ್ಲಿ ನಮೂದಿಸಿದ ಚಕ್ಕುಬಂದಿಯ ನಡುವೆಯೇ ನಮಗೆ ಕ್ರಯವಾಗಿರುತ್ತದೆ. ನಿಡಿ-13ರಲ್ಲಿರುವಂತಹ ಚಕ್ಕುಬಂದಿಯೇ ನಿಡಿ-14ರಲ್ಲಿ ಇರುತ್ತದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನಿಡಿ-14ರ ಪ್ರಕಾರ ಸರ್ವೆ ನಂ.72/3ರ ಜಮೀನಿನ ಪೂರ್ವಕ್ಕೆ ಬಾಳೇಗೌಡನ ಮಗ ಚೂಡೇಗೌಡನ ಜಮೀನು, ಪಶ್ಚಿಮಕ್ಕೆ ಹುಚ್ಚಿರೇಗೌಡನ ಜಮೀನು, ಉತ್ತರಕ್ಕೆ ಕಾಡೇಗೌಡನ ಜಮೀನು ಮತ್ತು ದಕ್ಷಿಣಕ್ಕೆ ಸರ್ಕಾರಿ ಖರಾಬು ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಡಿ-13ರಲ್ಲಿ ನಮೂದಿಸಿದ ಚಕ್ಕುಬಂದಿಗೂ ನಿಡಿ-14ರಲ್ಲಿ ನಮೂದಿಸಿದ ಚಕ್ಕುಬಂದಿಗೂ ತಾಳೆ ಇಲ್ಲ ಬಹಳಷ್ಟು ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ನಿಡಿ-14ರಲ್ಲಿರುವಂತಹ ಚಕ್ಕುಬಂದಿಯು ಸರ್ವೆ ನಂ.72/2ರ ಜಮೀನಿಗೆ ಸಂಬಂಧಿಸಿದ ಚಕ್ಕುಬಂದಿ ಎಂದರೆ ಸರಿಯಲ್ಲ. ನಿಡಿ-13 ಮತ್ತು ನಿಡಿ-14ರಲ್ಲಿ ನಮೂದಿಸಿದ ಉತ್ತರದ ಚಕ್ಕುಬಂದಿ ಕಡೆ ಇರುವಂತಹ ಜಮೀನೇ ಸರ್ವೆ ನಂ.72/3ರ ಜಮೀನು ಎಂದರೆ ಸರಿಯಲ್ಲ.

17. ನಿಡಿ-13 ಮತ್ತು ನಿಡಿ-14ರ ಸಮಯದಲ್ಲಿಯೇ ಆ ಕ್ರಯಪತ್ರಗಳ ಅಡಿಯಲ್ಲಿ ಮಾರಾಟ ಮಾಡಿದ ಜಮೀನುಗಳ ಉತ್ತರಕ್ಕೆ ಕಾಡೇಗೌಡ ಇರುತ್ತಾನೆ

ಎಂದು ನಮೂದಾಗಿರುತ್ತದೆ ಎಂದರೆ ಸಾಕ್ಷಿಯು ಆ ಕಾಡೇಗೌಡನೇ ಬೇರೆ ವಾದಿಗಳಿಗೆ ಸಂಬಂಧಿಸಿದ ಕಾಡೇಗೌಡನೇ ಬೇರೆ ಎಂದು ನುಡಿಯುತ್ತಾರೆ. ನಿಡಿ-13 ಮತ್ತು ನಿಡಿ-14ರಲ್ಲಿ ಉತ್ತರ ದಿಕ್ಕಿಗೆ ನಮೂದಿಸಿರುವ ಕಾಡೇಗೌಡನ ಬಗ್ಗೆ ಇರುವಂತಹ ದಾಖಲೆಗಳನ್ನು ಹಾಜರುಪಡಿಸಲು ಆಗುತ್ತದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರನ್ನು ಕರೆದುಕೊಂಡು ಬಂದು ಸಾಕ್ಷ್ಯ ನುಡಿಸುತ್ತೇನೆ ಎಂದು ನುಡಿಯುತ್ತಾರೆ. ನಿಡಿ-13 ಮತ್ತು ನಿಡಿ-14ರ ಕ್ರಯಪತ್ರಗಳಲ್ಲಿ ಉತ್ತರ ದಿಕ್ಕಿಗೆ ನಮೂದಿಸಿದ ಕಾಡೇಗೌಡ ರವರ ಜಮೀನಿನ ಸರ್ವೆ ನಂ.72/2 ಆಗಿರುತ್ತದೆ.

18. ನಮಗೆ ಕ್ರಯವಾಗಿರುವುದು ಸರ್ವೆ ನಂ.72/2ರಲ್ಲಿ ಆದರೆ ಕ್ರಯಪತ್ರದಲ್ಲಿ ತಪ್ಪಾಗಿ ಸರ್ವೆ ನಂ.72/3 ಎಂದು ನಮೂದಾಗಿರುವ ಕಾರಣಕ್ಕೆ ನಾವುಗಳು ದಾವಾಸ್ವತ್ತಿಗೆ ಸಂಬಂಧಿಸಿದಂತೆ ವಾದಿಯ ಸ್ವಾಧೀನಾನುಭವಕ್ಕೆ ವಿನಾಃ ಕಾರಣ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಮತ್ತು ಆತನ ಸಹೋದರರು ಮಾಡಿಕೊಂಡದಂತಹ ವಿಭಾಗ ಪತ್ರವನ್ನು ಈ ದಾವೆಯಲ್ಲಿ ಹಾಜರು ಪಡಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಅವರು ಮೌಖಿಕವಾಗಿ ವಿಭಾಗ ಮಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. ಮೌಖಿಕ ವಿಭಾಗ ಪತ್ರದ ಆಧಾರದ ಮೇಲೆ ನಮ್ಮ ತಂದೆ ಮತ್ತು ಆತನ ಸಹೋದರರಿಗೆ ಯಾವುದೇ ಖಾತೆ ಆಗಿಲ್ಲ. ನಮ್ಮ ತಂದೆ ಮತ್ತು ಆತನ ಸಹೋದರರ ನಡುವೆ ಯಾವುದೇ ವಿಭಾಗ ಆಗದೆ ಇದ್ದರು, ಮೌಖಿಕ ವಿಭಾಗ ಆಗಿತ್ತು ಎಂದು ಈ ಪ್ರಕರಣಕೋಸ್ಕರವೇ

ಸೃಷ್ಟಿಸಿಕೊಂಡು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ಕನಕಪುರದ ನ್ಯಾಯಾಲಯಗಳಲ್ಲಿ ನಮ್ಮ ಕುಟುಂಬದ ಸದಸ್ಯರುಗಳ ನಡುವೆ ಹಲವಾರು ದಾವೆಗಳು ನಡೆಯುತ್ತಿವೆ ಎಂದರೆ ಸರಿಯಲ್ಲ. ದಾವಾಸ್ವತ್ತಿನಲ್ಲಿ ವಾದಿ ಸ್ವಾಧೀನಾನುಭವದಲ್ಲಿದ್ದು ಉಳುಮೆ ಮಾಡುತ್ತಿದ್ದಾರೆ ಎಂಬ ಬಗ್ಗೆ ತಹಶೀಲ್ದಾರ್ ರವರು ಭೂ ಹಿಡುವಳಿ ಪ್ರಮಾಣ ಪತ್ರವನ್ನು ಅವರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕಾನೂನು ಬಾಹಿರವಾಗಿ ಖಾತೆ ಮಾಡಿಸಿಕೊಂಡು ದಾಖಲೆ ತೆಗೆದುಕೊಂಡಿರಬಹುದು ಎಂದು ನುಡಿಯುತ್ತಾರೆ. ವಾದಿ, ಆಕೆಯ ಗಂಡ ಮತ್ತು ಅವರ ಕುಟುಂಬಸ್ಥರು ಸುಮಾರು 100ವರ್ಷಗಳಿಂದಲ್ಲೂ ದಾವಾಸ್ವತ್ತಿನಲ್ಲಿ ಸ್ವಾಧೀನಾನುಭವದಲ್ಲಿದ್ದುಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸರಿಯಲ್ಲ.

20. ದಾವಾಸ್ವತ್ತಿನ್ನು ಹೇಗಾದರೂ ಮಾಡಿ ಕಸಿದುಕೊಳ್ಳಬೇಕೆಂಬ ಉದ್ದೇಶದಿಂದ ನಾವುಗಳು ವಾದಿಯ ಸ್ವಾಧೀನಾನುಭವಕ್ಕೆ 2014ನೇ ಸಾಲಿನಲ್ಲಿ ತೊಂದರೆ ಕೊಟ್ಟೆವು ಎಂದರೆ ಸರಿಯಲ್ಲ. ನಾವು ತೊಂದರೆ ಕೊಟ್ಟ ಕಾರಣಕ್ಕೆ ಊರಿನ ಗ್ರಾಮಸ್ಥರು ಸಹ ನಮಗೆ ಬುದ್ದಿವಾದ ಹೇಳಿರುತ್ತಾರೆ ಎಂದರೆ ಸರಿಯಲ್ಲ. ವಾದಿಗೆ ತೊಂದರೆ ಕೊಟ್ಟ ಕಾರಣಕ್ಕೆ ವಾದಿಯು ನಮ್ಮ ವಿರುದ್ದ ಹಾರೋಹಳ್ಳಿ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ. ಠಾಣೆಯಲ್ಲಿ ಸದರಿ ವ್ಯಾಜ್ಯವು ಸಿವಿಲ್

ಸ್ವರೂಪದ್ದಾದ ಕಾರಣಕ್ಕೆ ನ್ಯಾಯಾಲಯಕ್ಕೆ ಹೋಗಿ ಎಂದು ನಮಗೆ ತಿಳಿಸಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಕ್ರಯಪತ್ರವಿದೆ, ಸ್ವಾಧೀನಕ್ಕೆ ಹೋಗಲು ಸಾಧ್ಯವಿಲ್ಲ ಎಂದು ವಾದಿಗೆ ಹೇಳಿ ಪೊಲೀಸರು ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಈ ರೀತಿ ಪೊಲೀಸರು ಮೌಖಿಕವಾಗಿ ಹೇಳಿರುತ್ತಾರೆ. ಲಿಖಿತವಾಗಿ ಕೇಳಲು ನಮಗೆ ತೊಂದರೆ ಇರಲಿಲ್ಲ.

21. ಕ್ರಯಪತ್ರಗಳಲ್ಲಿ ನಮೂದಾದಂತಹ ತಪ್ಪು ಸರ್ವೆ ನಂಬರ್ ಮತ್ತು ತಪ್ಪು ಚಕ್ಕುಬಂದಿಯ ದುರುಪಯೋಗ ಪಡಿಸಿಕೊಂಡು ದಾವಾಸ್ವತ್ತಿನಿಂದ ಹೇಗಾದರೂ ವಾದಿಯನ್ನು ಓಡಿಸಬೇಕೆಂಬ ದುರುದ್ದೇಶದಿಂದ ನಾವುಗಳು ಆಕೆಯ ಸ್ವಾಧೀನಾನುಭವಕ್ಕೆ ಪದೇ ಪದೇ ತೊಂದರೆ ಕೊಡುತ್ತಿದ್ದೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆ:- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**

O.S.No.222/2014

D.W.:1